# ಶ್ರೀಮಾತೆಯವರ ಪತ್ರಗಳು - ೧೨

ಅನುವಾದ: **ಪ್ರವ್ರಾಜಿಕಾ ಧರ್ಮಪ್ರಾಣಾ**

### ಪತ್ರ - ೬೨

ಶ್ರೀ ಗುರುದೇವರ ಶ್ರೀಚರಣದಲ್ಲಿ ಭರವಸೆ

೫.೧.೧೯೧೧
ಕೊಠಾರ್ , ಗುರುವಾರ

ಶುಭವಾಗಲಿ.

ಮಗೂ, ನಿನ್ನ ಪತ್ರವು ಸಿಕ್ಕಿ ಆನಂದಿತಳಾದೆ. ನೀನು ಬಿದ್ದು ನಿನ್ನ ಕಾಲು ಉಳುಕಿತ್ತು ಎಂದು ಈ ಮೊದಲೇ ಶರತ್‌ನ ಪತ್ರದಿಂದ ಅರಿತೆ. ಈಗ ಹೇಗಿದ್ದೀಯಾ ಎಂದು ಬರೆದು ತಿಳಿಸು. ನಿನಗೆ ನನ್ನ ಆಶೀರ್ವಾದಗಳು ಮತ್ತು ಉಳಿದ ಎಲ್ಲ ಮಕ್ಕಳಿಗೂ ಅದನ್ನು ಕೊಡು. ಇತಿ,

ನಿಮ್ಮೆಲ್ಲರ ತಾಯಿ.

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*The Swami Ramakrishnananda*
*Sri Ramakishna Math*
*Mylapur, Madras*

### ಪತ್ರ - ೬೩

ಶ್ರೀ ಗುರುದೇವರ ಶ್ರೀಚರಣಗಳಲ್ಲಿ ಭರವಸೆ

೭.೧.೧೯೧೧
ಕೊಠಾರ್, ಶನಿವಾರ

ಮಂಗಳವಾಗಲಿ.

ಮಗೂ, ನೀನು ಕಳುಹಿಸಿರುವ ವಸಂತನ ೧೫ ರೂಪಾಯಿ ಸಿಕ್ಕಿದೆ. ನೀನು ನನ್ನ ಆಶೀರ್ವಾದ ಸ್ವೀಕರಿಸು ಹಾಗೂ ಅವನಿಗೂ ಕೊಡು. ನನ್ನ ದೇಹಾರೋಗ್ಯ ಪರವಾಗಿಲ್ಲ. ನೀನು ಹೇಗಿರುವೆ ಎಂದು ಬೇಗ ಬರೆ. ಇಲ್ಲಿಯ ಉಳಿದಂತೆ ಎಲ್ಲವೂ ಕ್ಷೇಮ. ಇತಿ,

ನಿಮ್ಮೆಲ್ಲರ ತಾಯಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*The Swami Ramakrishnananda*
*the Ramakrishna Math*
*Mylapur, Madras*

### ಪತ್ರ - ೬೪

೧೭.೪.೧೯೧೧
Udvodhan Office
12, 13 Gpopalchandra Neogi's Lanes
Bagh-bazar , P.O.Calcatta
Dated, The 17ನೇ ಎಪ್ರಿಲ್, 1911



ಮಂಗಳವಾಗಲಿ.

ನಾವೆಲ್ಲರೂ ಹಿಂದಿನ ಮಂಗಳವಾರ ನಿರ್ವಿಘ್ನವಾಗಿ ತಲುಪಿದೆವು. ನಿತಾಯಿಯ ತಾಯಿ ಈಗ ಬಹುಮಟ್ಟಿಗೆ ಚೆನ್ನಾಗಿದ್ದಾರೆ. ನಾನು ಚೆನ್ನಾಗಿದ್ದೇನೆ. ಮಠದಲ್ಲಿ ಹಾಗೂ ಇಲ್ಲಿ ಎಲ್ಲರೂ ಕ್ಷೇಮ. ನಿನಗೆ ನನ್ನ ಆಶೀರ್ವಾದ, ಹಾಗೂ ಉಳಿದೆಲ್ಲರಿಗೂ ತಿಳಿಸು.

ಆಶೀರ್ವಾದವನ್ನು ನೀಡುವ,
ನಿನ್ನ ಮಾತೃದೇವಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*To His Holiness*
*Swami Ramakrishnananda*
*Ramakrishna Home*
*Brodies' Road,*
*Mylapore, Madras*

### ಪತ್ರ - ೬೫

ಶ್ರೀ ಶ್ರೀ ಗುರುದೇವ
ಶ್ರೀ ಶ್ರೀ ಪಾದಪದ್ಮಗಳಲ್ಲಿ ಭರವಸೆ

೨.೫.೧೯೧೧
೧೪ನೇ ವೈಶಾಖ

ಪರಮ ಶುಭಾಶೀರ್ವಾದ.

ಮಗೂ ಶಶಿ, ನಿನಗೆ ನಾನು ಪತ್ರ ಬರೆಯಲಾಗಲಿಲ್ಲ. ಚಿಕ್ಕ ಸೊಸೆಯ ತಲೆ ಬಿಸಿಯಾಗಿತ್ತು. ಅವಳನ್ನು ಕಟ್ಟಿಕೊಂಡು ತುಂಬಾ ತೊಡಕಿನಲ್ಲಿದ್ದೇನೆ, ಆದರೆ ಈಗ ಸ್ವಲ್ಪ ವಾಸಿ. ನಿನ್ನ ಅಸ್ವಸ್ಥತೆಯ

ವಿಚಾರ ಕೇಳಿ ಅತ್ಯಂತ ಚಿಂತೆಯಲ್ಲಿದ್ದೇನೆ ಹಾಗೂ ದುಃಖದಲ್ಲಿದ್ದೇನೆ. ನೀನು ಬೇಗನೆ ಗುಣಮುಖನಾಗಲು ಭಗವಂತನಲ್ಲಿ ಪ್ರಾರ್ಥಿಸುತ್ತಿದ್ದೇನೆ. ನಿನಗೆ ಕಲ್ಕತ್ತೆಗೆ ಬರುವ ಇಚ್ಛೆ ಇದೆಯೆ? ಒಂದು ವೇಳೆ ಇದ್ದರೆ, ಮಗೂ ಇವರು ನಿನ್ನನ್ನು ಕರೆದುಕೊಂಡು ಬರುತ್ತಾರೆ. ಇವರೆಲ್ಲ ಅದನ್ನೇ ಮಾತನಾಡಿಕೊಳ್ಳುತ್ತಿದ್ದಾರೆ. ತುಂಬಾ ಎಚ್ಚರಿಕೆಯಿಂದಿರು. ರುದ್ರ, ಪ್ರಕಾಶ್, ರಾಮು, ಸೇವಾನಂದ ಮತ್ತು ಉಳಿದ ಎಲ್ಲರಿಗೂ ನನ್ನ ಆಶೀರ್ವಾದ ತಿಳಿಸು. ಡಾಕ್ಟರ್ ಹೇಗಿದ್ದಾನೆ? ಅವನಿಗೆ ನನ್ನ ಆಶೀರ್ವಾದವನ್ನು ತಿಳಿಸು. ನಿನ್ನೆ ಬೇಲೂರು ಮಠಕ್ಕೆ ಹೋಗಿದ್ದೆ. ಅಲ್ಲಿ ಕಾಳೀಕೀರ್ತನೆ ನಡೆಯಿತು. ಎಲ್ಲರೂ ನಿನಗಾಗಿ ಚಿಂತಿಸುತಿದ್ದಾರೆಂದು ತಿಳಿ. ಇಲ್ಲಿ ಎಲ್ಲರೂ ಚೆನ್ನಾಗಿದ್ದಾರೆ. ನನ್ನ ಆಶೀರ್ವಾದ ತೆಗೆದುಕೋ. ಠಾಕೂರರ ಕೃಪೆಯಿಂದ ಬೇಗ ಆರೋಗ್ಯ ಹೊಂದು. ಇದನ್ನೇ ಪ್ರಾರ್ಥಿಸುತ್ತಿದ್ದೇನೆ.

ಇತಿ ಆಶೀರ್ವಾದವನ್ನು ನೀಡುವ,

ನಿನ್ನ ತಾಯಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*Swami Ramakrishnananda*
*Ramakrishna Math*
*Bull Temple Road*
*Banagalore City*

**ವಿವರಣೆ :** ಚಿಕ್ಕ ಸೊಸೆ ಎಂದರೆ ಶ್ರೀಮಾತೆಯವರ ಚಿಕ್ಕ ಸಹೋದರನ ಪತ್ನಿ, ಎಂದರೆ ರಾಧುವಿನ ತಾಯಿ. ಭಕ್ತವೃಂದದವರಿಗೆ ಆಕೆ 'ಹುಚ್ಚಿ ಅತ್ತೆ' ಎಂಬ ಹೆಸರಿನಲ್ಲಿ ಪರಿಚಿತರು.

## ಪತ್ರ - ೬೬

ಶ್ರೀ ಶ್ರೀ ರಾಮಕೃಷ್ಣ ಶ್ರೀ ಚರಣಗಳಲ್ಲಿ ಭರವಸೆ

ಜಯರಾಂಬಾಟಿ

೧೫.೭.೧೯೧೧

ಪರಮ ಶುಭಾಶೀರ್ವಾದ.

ಪ್ರೀತಿಯ ಮಗೂ,

ನಿನ್ನ ಪತ್ರ ಸಿಕ್ಕಿದೆ. ನಾನು ಈಗ ಜಯರಾಂಬಾಟಿಯಲ್ಲಿದ್ದೇನೆ. ನಿಮಗೆ ಇಲ್ಲಿಗೆ ಬರಲು ತುಂಬಾ ಅನಾನುಕೂಲವಾಗಬಹುದು. ಇನ್ನೂ ಬೇರೆ ತೊಂದರೆಗಳೂ ಇವೆ. ನಾನು ಯಾವಾಗ ಕಲ್ಕತ್ತಕ್ಕೆ ಹೋಗುವೆನೋ ಆಗ ಅಲ್ಲಿಗೆ ಬನ್ನಿ. ನೀನು ಠಾಕೂರರ ಕೃಪೆಯನ್ನು ಪಡೆದಿರುವೆ. ಠಾಕೂರರು ನಿನ್ನ ಮನಸ್ಸಿನ ಆಕಾಂಕ್ಷೆಯನ್ನು ಈಡೇರಿಸುವರು. ಪಾದಧೂಳಿಯನ್ನು ಕಳುಹಿಸಿದ್ದೇನೆ. ನಾನು ಅನುಮತಿಯನ್ನು ನೀಡುತ್ತಿದ್ದೇನೆ, ಅದನ್ನು ಬೇರೆ ಧೂಳಿನ ಜೊತೆ ಬೆರೆಸಿ, ಪ್ರಮಾಣವನ್ನು ಹೆಚ್ಚಿಸಿಕೋ.

ನಿನ್ನ ಸ್ನೇಹ ಮಯಿ, ತಾಯಿ.

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*ಶ್ರೀ ತಾರಕನಾಥ ರಾಯ್ ಚೌಧುರಿ*
*ಕಠಿಯಾದಿ ಸಬ್ ರಿಜಿಸ್ಟ್ರಿ ಆಫೀಸ್*
*ಅಂಚೆ: ಕಠಿಯಾದಿ; ಜಿಲ್ಲೆ: ಮೈಮನ್‌ಂಗ್ (ಬಾಂಗ್ಲಾದೇಶ)*

## ಪತ್ರ - ೬೭

ಶ್ರೀ ರಾಮಕೃಷ್ಣಾಯ ನಮೋ

೩೦. ೭. ೧೯೧೧

ಜಯರಾಂಬಾಟಿ

೧೪ನೇ ಶ್ರಾವಣ, ೧೩೧೮

ಪರಮ ಶುಭಾಶೀರ್ವಾದ. ವಿಶೇಷವೇನೆಂದರೆ,

ನೀನು ಕಳುಹಿಸಿರುವ ಶ್ರಾವಣ ೫ರ ಪತ್ರ ಸಿಕ್ಕಿತ್ತು. ನೀನು ಫೋಟೋ ಬಗ್ಗೆ ಬರೆದಿರುವೆ. ಆದರೆ ಇಲ್ಲಿ ನನ್ನ ಬಳಿ ಫೋಟೋ ಇಲ್ಲ. ನೀನು ೧೨, ೧೩ ನಂಬರ್, ಗೋಪಾಲ್ ಚಂದ್ರ ನಿಯೋಗೀರ್ ಲೇನ್ , ಉದ್ಬೋಧನ ಆಫೀಸಿಗೆ ಪತ್ರ ಬರೆದರೆ ಸಿಗಬಹುದು. ನೀನು ಹಣದ ವಿಷಯ ನನಗೆ ಬರೆಯಲು ಹೇಳಿರುವೆ. ಅದರ ಬಗ್ಗೆ ನಾನು ಏನು ಬರೆಯಲಿ? ನಿನಗೆ ಯಾವಾಗ ಏನು ತೋರುವುದೋ ಆಗ ಅದನ್ನು ಕಳುಹಿಸಬಹುದು. ನಾನು ಒಂದು ರೀತಿಯಲ್ಲಿ ಚೆನ್ನಾಗಿದ್ದೇನೆ. ನೀವೆಲ್ಲರೂ ಚೆನ್ನಾಗಿರಲು ಪ್ರಾರ್ಥಿಸುತ್ತಿದ್ದೇನೆ.

''ನಿಮ್ಮೆಲ್ಲರ ತಾಯಿ ''

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*ಶ್ರೀ ತಾರಕನಾಥ್ ಶರ್ಮ ರಾಯ್ ಚೌಧುರಿ*
*ಕಠಿಯಾದಿ ಸಬ್ ರಿಜಿಸ್ಟ್ರಿ ಆಫೀಸ್*
*ಅಂಚೆ: ಕಠಿಯಾದಿ Kuthiadi*
*ಜಿಲ್ಲೆ: ಮೈಮನ್‌ಸಿಂಗ್*

## ಪತ್ರ -೬೮

ಶ್ರೀ ಶ್ರೀ ದುರ್ಗೆಯ ಕೃಪೆ

ಶ್ರೀ ಶ್ರೀ ಜಯ ರಾಮಕೃಷ್ಣ

೭.೮.೧೯೧೧

೨೨ನೇ ಶ್ರಾವಣ

ಚಿರಂಜೀವಿಗೆ,

ಪ್ರೀತಿಯ ಮಗೂ, (ಬಹುದಿನಗಳಾಯಿತು) ನಿನ್ನ ಮತ್ತು ನಿನ್ನ ಮಕ್ಕಳ ಕುಶಲ ವಾರ್ತೆ ಬರೆದು ತಿಳಿಸು. ನನ್ನ ವಿಳಾಸ — ಜಯರಾಂಬಾಟಿ ಗ್ರಾಮ. ಶ್ರೀ ಪ್ರಸನ್ನ ಕುಮಾರ್ ಮುಖ್ಯೋಪಾಧ್ಯಾಯ ಬಾಟಿ. ಅಂಚೆ : ಆನೂರ್ ಜಿಲ್ಲೆ: ಹೂಗ್ಲಿ

ಇಲ್ಲಿ ನಾವೆಲ್ಲರೂ ಚೆನ್ನಾಗಿದ್ದೇವೆ.

ಆಶೀರ್ವಾದಗಳೊಂದಿಗೆ ಪತ್ರ —

ನಿಮ್ಮೆಲ್ಲರ ತಾಯಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*ಪರಮ ಶುಭ*
*ಶ್ರೀಯುತ ಬಾಬು ತಾರಕನಾಥ ರಾಯ್ ಚೌಧುರಿ*
ಮಗನೆ ಸುರಕ್ಷಿತವಾಗಿರು —
*ಅಂಚೆ: ಕಠಿಯಾದಿ ಸಬ್ ರಿಜಿಷ್ಟ್ರಿ ಆಫೀಸ್*
*ಜಿಲ್ಲೆ: ಮೈಮನ್‌ಂಗ್*